# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್ ರಸ್ತೆ, ತುಮಕೂರು -572103

ದೂರವಾಣಿ; 0816-225596, 0816-2255597, 0816-2255597 ಫ್ಯಾಕ್ಸ್ ; 0816-2270719


ಸಂಖ್ಯೆ:ತುವಿ:ಶೈವಿ:UG-ADM:2022-23:2739 ದಿನಾಂಕ:04.08.2022

## ಪರಿಷ್ಕೃತ ಸ್ನಾತಕ ಪ್ರವೇಶಾತಿ ಅಧಿಸೂಚನೆ 2022-23

**ವಿಷಯ:** 2022-23ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿ ಕುರಿತು.

**ಉಲ್ಲೇಖ :** 1) ಈ ಕಚೇರಿ ಅಧಿಸೂಚನೆ ಸಂಖ್ಯೆ:ತುವಿ:ಶೈವಿ:UG-ADM:2022-23 ದಿನಾಂಕ: 12.07.2022

2) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 03.08.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅನ್ವಯ 2022-23ನೇ ಸಾಲಿನಲ್ಲಿ ಒಂದನೇ ಸೆಮಿಸ್ಟರ್ ಪದವಿ ತರಗತಿಗಳ ಪ್ರವೇಶಾತಿಯನ್ನು ದಿನಾಂಕ:**20.06.2022** ರಿಂದ ಪ್ರಾರಂಭಿಸಲು ಅಧಿಸೂಚಿಸಲಾಗಿತ್ತು. ವಿಶ್ವವಿದ್ಯಾನಿಲಯದ ಎಲ್ಲಾ ಘಟಕ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶಾತಿ ಸಮಿತಿಯನ್ನು ರಚಿಸಿಕೊಂಡು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ help desk ಗಳನ್ನು ಸ್ಥಾಪಿಸಿ, UUCMS ಅಡಿಯಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯ (NEP) ಅನ್ವಯ ನಾಲ್ಕು ವರ್ಷಗಳ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪ್ರಕ್ರಿಯೆಯನ್ನು ನಿರ್ವಹಿಸಲು ಕ್ರಮಕೈಗೊಳ್ಳಲು ಸೂಚಿಸಲಾಗಿದೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಉಲ್ಲೇಖ(1)ರ ಅಧಿಸೂಚನೆಯನ್ನು ಪರಿಷ್ಕರಿಸಿ ಕೆಳಕಂಡಂತೆ ಅಧಿಸೂಚಿಸಲಾಗಿದೆ.

| | |
|---|---|
| ಅರ್ಜಿ ಸಲ್ಲಿಸಲು ಪ್ರಾರಂಭ | 20.06.2022 |
| ದಂಡಶುಲ್ಕವಿಲ್ಲದೆ ಪ್ರವೇಶಾತಿ ಕೊನೆಯ ದಿನಾಂಕ | 16.08.2022 |
| ರೂ. 1000/- ದಂಡಶುಲ್ಕದೊಂದಿಗೆ ಪ್ರವೇಶಾತಿ ಕೊನೆಯ ದಿನಾಂಕ | 28.08.2022 |
| ಮೊದಲ ಸೆಮಿಸ್ಟರ್‌ನ ತರಗತಿಗಳ ಪ್ರಾರಂಭ ದಿನಾಂಕ | 17.08.2022 |
| ಪ್ರವೇಶ ಪಟ್ಟಿಗಳನ್ನು ತ್ರಿಪ್ರತಿಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ | 30.08.2022 |

ಈ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳೊಳಗಾಗಿ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾಯ ಕೋರ್ಸುಗಳಿಗೆ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳತಕ್ಕದ್ದು.

ವಿಶೇಷ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸುವುದು:-

1. **2022-23ನೇ ಶೈಕ್ಷಣಿಕ ಸಾಲಿನಲ್ಲಿ ಮಾನ್ಯತೆ ಹೊಂದಿದ ಕೋರ್ಸುಗಳಿಗೆ/ಪ್ರವೇಶ ಮಿತಿಗೆ ಮಾತ್ರ ಪ್ರವೇಶಾತಿ ಮಾಡಿಕೊಳ್ಳುವುದು.**
2. **2022-23ನೇ ಸಾಲಿನ ಸಂಯೋಜನೆ ಪ್ರಸ್ತಾವನೆಯಲ್ಲಿ ಹೊಸ ಕಾಲೇಜು/ಹೊಸ ಕೋರ್ಸುಗಳಿಗೆ/ಪ್ರವೇಶ ಮಿತಿ ಹೆಚ್ಚಳಿಕೆ ಕುರಿತಂತೆ ನಿಯಮಾನುಸಾರ ವಿಶ್ವವಿದ್ಯಾನಿಲಯದಿಂದ ಸಂಯೋಜನಾ ಮಾನ್ಯತೆ ಮಂಜೂರಾಗದ ಹೊರತು ಪ್ರವೇಶ ಮಾಡಿಕೊಳ್ಳುವಂತಿಲ್ಲ.**
3. 2022-23 ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಸಂಬಂಧ ಸರ್ಕಾರ/ಯುಜಿಸಿಯಿಂದ ಕಾಲಕಾಲಕ್ಕೆ ಹೊರಡಿಸುವ ಮಾರ್ಗಸೂಚಿ/ಆದೇಶಗಳನ್ನು ಅನುಸರಿಸುವ ಕುರಿತು ಆಗಾಗ್ಗೆ ತಿಳಿಸಲಾಗುವುದು.
4. ಇನ್ನುಳಿದಂತೆ ಯು.ಜಿ.ಸಿ/ಎಂಹೆಚ್‌ಎ/ ಸರ್ಕಾರ ಹೊರಡಿಸುವ ಮಾರ್ಗಸೂಚಿಯನ್ವಯ 2022-23ರ ಶೈಕ್ಷಣಿಕ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಅಧಿಸೂಚಿಸಲಾಗುವುದು.
5. ಬಿ.ಎ. ಹಾಗೂ ಬಿ.ಎಸ್ಸಿ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿ ಎರಡು ವಿಷಯಗಳನ್ನು ಮುಖ್ಯವಿಷಯಗಳಾಗಿ ಹಾಗೂ ಇವರೆಡು ವಿಷಯಗಳಿಗೆ ಹೊರತಾದ ಒಂದು ಶಿಸ್ತು/ವಿಷಯ/ಮುಕ್ತ ಆಯ್ಕೆ ಪತ್ರಿಕೆಯನ್ನು ಆಯ್ದುಕೊಳ್ಳಬೇಕು. ಆದರೆ ಪ್ರವೇಶಾತಿಯನ್ನು ಎರಡು ಮುಖ್ಯ ವಿಷಯಗಳಿಗೆ ಮಾಡಿಕೊಳ್ಳಬೇಕು.
6. ಒಂದೇ ವಿಷಯದ ಮೇಲೆ ಕೇಂದ್ರಿಕೃತವಾದ ಬಿ.ಕಾಂ. ಇತ್ಯಾದಿ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಒಂದೇ ವಿಷಯಕ್ಕೆ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದು.